ಅ) ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ ಮುಂಗಡ ಪತ್ರದಲ್ಲಿ ಹಣ ಒದಗಿಸಿದೆ. ನಿರ್ಮಾಣ ಹಾಗೂ ದುರಸ್ತಿಗಾಗಿ ಹಣವನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿಯವರಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಮೂಲಕ ಬಿಡುಗಡೆ ಮಾಡಲಾಗುತ್ತಿದೆ.

ಇ) ಶಾಲಾ ಕೊಠಡಿಗಳ ನಿರ್ಮಾಣ ವಿವರ.

	ಪ್ರಾಥಮಿಕ ಶಾಲೆ	ಪ್ರೌಢ ಶಾಲೆ
ಬೆಂಗಳೂರು	೧.೬೪	೫.೮೦
ಬೆಂಗಳೂರು (ಗ್ರಾಮಾಂತರ)	೧.೦೩	೩.೨೦
ಚಿತ್ರದುರ್ಗ	೧.೩೨	೩.೫೦
ಕೋಲಾರ	೧.೩೮	೩.೦೦
ಶಿವಮೊಗ್ಗ	೧.೦೨	೩.೦೦
ತುಮಕೂರು	೧.೨೦	೧.೫೦
ಮೈಸೂರು	೨.೪೬	೩.೦೦
ಚಿಕ್ಕಮಗಳೂರು	೨.೨೮	೫.೦೦
ದಕ್ಷಿಣ ಕನ್ನಡ	೩.೭೨	೭.೦೦
ಹಾಸನ	೧.೦೨	೩.೦೦
ಕೊಡಗು	೧.೮೬	೬.೮೦
ಮಂಡ್ಯ	೧.೮೮	೬.೮೦
ಬೆಳಗಾಂ	೧ ೪೪	೩.೫೦
ಬಿಜಾಪುರ	೧.೩೮	೫.೫೦
ಧಾರವಾಡ	೨.೨೮	೩ ೦೦
ಉತ್ತರ ಕನ್ನಡ	೦.೯೬	೧.೦೦
ಗುಲ್ಬರ್ಗ	೧.೩೨	೫.೭೫
ಬಳ್ಳಾರಿ	೦,೯೦	೩.೮೦
ಬೀದರ್	೦.೭೮	೨.೦೦
ರಾಯಚೂರು	೧.೧೪	೩.೨೫
ಒಟ್ಟು ಮೊತ್ತ	೩೦.೦೦ ಲಕ್ಷ	೭೦.೦೦ ಲಕ್ಷ

ದುರಸ್ತಿಗಾಗಿ ಆಗುವ್ಯಯದಲ್ಲಿ ಜಿಲ್ಲಾ ಪರಿಷತ್ತುಗಳಿಗೆ ಒಟ್ಟು ೯೧ ಲಕ್ಷ ರೂ. ಹಣ ಒದಗಿಸಿದೆ. ಬೆಂಗಳೂರು ನಗರ ಪ್ರದೇಶದ ಶಾಲಾ ಕಟ್ಟಡಗಳ ದುರಸ್ತಿಗಾಗಿ ಬೆಂಗಳೂರು ನಗರ ಜಿಲ್ಲಾಧಿಕಾರಿಯವರಿಗೆ ಒಟ್ಟು ೧೮ ಲಕ್ಷ ಹಣವನ್ನು ಬಿಡುಗಡೆ ಮಾಡಲಾಗಿದೆ.

ನಾಲ್ಕನೇ ರಾಷ್ಟ್ರೀಯ ಹೆದ್ದಾರಿ

೭೧೨. ಶ್ರೀ ಪಂಪಾಪತಿ (ದಾವಣಗೆರೆ) —ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆ ಹೊರ ವಲಯದಿಂದ ಹಾದು ಹೋಗಲು ಹೊಸದಾಗಿ ನಿರ್ಮಿಸುತ್ತಿರುವ ನಾಲ್ಕನೆಯ ರಾಷ್ಟ್ರೀಯ ಹೆದ್ದಾರಿಯನ್ನು ಯಾವಾಗ ಸಾರ್ವಜನಿಕರ ಉಪಯೋಗಕ್ಕೆ ಬಿಡುಗಡೆ ಮಾಡಲಾಗುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ರೈಲ್ವೆ ಮೇಲೆ ಸೇತುವೆ ೮೮ರ ಮಾರ್ಚ್ ತಿಂಗಳೊಳಗೆ ಮುಗಿಯುವ ನಿರೀಕ್ಷೆ ಇದೆ. ಮಾರ್ಚ್ ತಿಂಗಳ ನಂತರ ಸಂಚಾರಕ್ಕೆ ಬಿಡಬಹುದು.